
# ಜ್ಞಾನಶಕ್ತಿ
ಮಾಸ ಪತ್ರಿಕೆ
JNANASHAKTHI


ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2021-23
Date of Posting, Kodialbail Post Office
on 12th of every Month

ಸಂಪುಟ - 12 Reg. No. : KARBIL / 2005 / 16123 ಫೆಬ್ರವರಿ - 2023 ಪುಟ : 8 ದರ ₹ 3-00 ವಾರ್ಷಿಕ ಚಂದಾ ₹ 30-00 ಸಂಚಿಕೆ : 02 ಪ್ರಕಟಣೆ : 22-02-2023


## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ

ಪುತ್ತೂರಿನ ಖ್ಯಾತ ವಕೀಲರೂ, ಲೆಕ್ಕಪರಿಶೋಧಕರೂ ಮತ್ತು ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾದ ಶ್ರೀ ನಟರಾಜ್ ಎನ್. ಎಸ್. ಮತ್ತು ಶ್ರೀಮತಿ ಚಂದ್ರಶ್ರೀ ನಟರಾಜ್ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** (ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಈ ಸಂದರ್ಭ ಅವರ ಮಕ್ಕಳಾದ ಶ್ರೀ ಹೇಮಂತ್ ಎನ್. ಎಸ್., ಶ್ರೀ ಶರತ್ ಎನ್. ಎಸ್., ಸೊಸೆಯರಾದ ಶ್ರೀಮತಿ ಅಮೃತಾ ಹೇಮಂತ್, ಶ್ರೀಮತಿ ಚಂದನಾ ಶರತ್, ಮೊಮ್ಮಗ ಮಾ। ವೈಶಾಖ್, ಶ್ರೀ ಸಭಾದ ಅಧ್ಯಕ್ಷರಾದ ಶ್ರೀ ಹರ್ಷಕುಮಾರ್ ಕೆ., ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಚೇತನ್ ಶರ್ಮ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ನಿರ್ದೇಶಕರಾದ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.



ಚಿತ್ರ : ಶ್ರೀ ರಘುವೀರ್ ಪೆರ್ಡೂರ್



ಶ್ರೀಮತಿ ಸಂಧ್ಯಾ ಮತ್ತು ಶ್ರೀ ಸನತ್ ಉದ್ಯಾವರರವರು ತಮ್ಮ ಮಾತಾಪಿತರಾದ ಶ್ರೀ ಸ್ಕಂದಸ್ವಾಮಿ ಮತ್ತು ಶ್ರೀಮತಿ ಶಾಂತಿ ಉದ್ಯಾವರ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** (ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಶ್ರೀ ಸನತ್‌ರವರು ಮೂಲ್ಕಿ ಡಾ। ಬಿ. ಎಚ್. ರಾಘವ ರಾವ್ ಮತ್ತು ಶ್ರೀಮತಿ ಸುಮತಿಯವರ ಅಳಿಯನಾಗಿದ್ದು, ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.

ಮಂಗಳೂರು ಕುಲಶೇಖರ ನಿವಾಸಿ ನಿವೃತ್ತ ಸಿಂಡಿಕೇಟ್ ಬ್ಯಾಂಕ್ ಜನರಲ್ ಮೆನೇಜರ್ ಶ್ರೀ ಐ. ಪಿ. ನಾಗರಾಜ್ ರಾವ್ ಮತ್ತು ಶ್ರೀಮತಿ ಭುವನೇಶ್ವರಿ ಎನ್. ರಾವ್ ದಂಪತಿಗಳು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **1,00,000/-** (ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಶ್ರೀ ಸಭಾದ ವಿದ್ಯಾನಿಧಿಗೆ ರೂ. **10,000/-** ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಶ್ರೀಮತಿ ಶೈಲಜಾ ಶ್ರೀಕಾಂತ್, ನಿರ್ದೇಶಕ ಶ್ರೀ ರಘುವೀರ್ ಪೆರ್ಡೂರ್ ಉಪಸ್ಥಿತರಿದ್ದರು.



ಚಿತ್ರ : ಶ್ರೀ ರಘುವೀರ್ ಪೆರ್ಡೂರ್



ಮಂಗಳೂರು ನಿವಾಸಿ ಡಾ। ಶಾಲಿನಿ ರಾವ್ ಮತ್ತು ಡಾ। ಸುನೀಲ್ ಪದ್ಮರಾಜ್ ರಾವ್ ದಂಪತಿಗಳು ತಮ್ಮ ತಾಯಿ ದಿ। ಸುಮತಿ ಪದ್ಮರಾಜ್ ರಾವ್‌ರವರ ಸ್ಮರಣಾರ್ಥ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕ ವಸತಿ ನಿಲಯಕ್ಕೆ ರೂ. **1,00,000/-** (ಒಂದು ಲಕ್ಷ) ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಉಪಸ್ಥಿತರಿದ್ದರು.



ಹರ್ಷಕುಮಾರ್ ಕೇದಗೆ
'ಅನುಗ್ರಹ', ನಂತೂರು, ಮಂಗಳೂರು

## ಕೃತಜ್ಞತಾ ಸಮರ್ಪಣೆ

ದಿನಾಂಕ **10-02-2023**ನೇ ಶುಕ್ರವಾರ
ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದಲ್ಲಿ ನೆರವೇರಿದ
ನಮ್ಮ ಪೌತ್ರ ವ, ಶ್ರೀಮತಿ ಸ್ವಾತಿ ಮತ್ತು ಶ್ರೀ ಪ್ರಮೋದ್ ಕುಮಾರ್ ಇವರ ಪುತ್ರ
**ಚಿ। ಹಾರ್ದಿಕ್ ಕುಮಾರ್‌ನ ಬ್ರಹ್ಮೋಪದೇಶ ಸಮಾರಂಭಕ್ಕೆ**
ನಮ್ಮ ಆಮಂತ್ರಣವನ್ನು ಮನ್ನಿಸಿ, ಆಗಮಿಸಿ, ಆತಿಥ್ಯವನ್ನು ಸ್ವೀಕರಿಸಿ,
ವಟುವಿಗೆ ಹಾಗೂ ನಮ್ಮ ಕುಟುಂಬಕ್ಕೆ ಶುಭವನ್ನು ಹಾರೈಸಿದ
ನಮ್ಮೆಲ್ಲಾ ಬಂಧು-ಮಿತ್ರರಿಗೆ ಹಾಗೂ ಹಿತೈಷಿಗಳಿಗೆ ಕೃತಜ್ಞತೆಗಳು.

ಶ್ರೀಮತಿ ಸ್ವಾತಿ ಮತ್ತು
ಶ್ರೀ ಪ್ರಮೋದ್ ಕುಮಾರ್ ಕೇದಗೆ

ಶ್ರೀಮತಿ ಕನಕವಲ್ಲಿ ಮತ್ತು
ಶ್ರೀ ಹರ್ಷಕುಮಾರ್ ಕೇದಗೆ

- ನಾವು ನಂಬುವ ತತ್ತ್ವಗಳಿಗಿಂತ ಬದುಕುವ ರೀತಿ ಮುಖ್ಯ. – ಎ. ಎನ್. ಮೂರ್ತಿ ರಾವ್
- ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕ್ಕೆ ಮೀಸಲು ನವ ಸಂವತ್ಸರ. – ಕುವೆಂಪು

**ಜ್ಞಾನಶಕ್ತಿ ಮಾಸ ಪತ್ರಿಕೆ**

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್ ಪುತ್ತೂರು**
ಮೊಬೈಲ್ : 9448481696

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
- ನಾಗರಾಜ್ ವರ್ಕಾಡಿ
- ರಘುವೀರ್ ಪೆರ್ಡೂರು
- ಟಿ. ಬಿ. ಮೋಹನ್ ರಾವ್
- ಸ್ವಾತಿ ಪ್ರಮೋದ್ ಕ್ಯಾದಿಗೆ

ಆರ್ಥಿಕ ಸಲಹಾ ಸಮಿತಿ :
- ಕರುಣ್ ರಾವ್ ಬೆಳ್ಳೆ
- ಅನಿಲ್ ರಾವ್ ಬಿ. ಎಸ್.

ಗೌರವ ಸಲಹೆಗಾರರು :
- ಚೇತನ್ ಶರ್ಮ
- ಶ್ರೀಮತಿ ಅರುಣಾ ಸೋಮಶೇಖರ್

ಪ್ರಕಾಶಕರು :
**ಹರ್ಷಕುಮಾರ್ ಕೇದಿಗೆ**

: 7795116598 ✆ : 9343361618
e-mail : jnanashakthisss@gmail.com


# ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

## ‘ಸ್ಕೋಲರ್ಸ್ ಡೇ - 2023’

ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಇದರ ವತಿಯಿಂದ ದಿನಾಂಕ **19-02-2023**ನೇ ಭಾನುವಾರದಂದು ‘ಸ್ಕೋಲರ್ಸ್ ಡೇ 2023’ ಕಾರ್ಯಕ್ರಮ ನಡೆಯಿತು.

**ಶ್ರೀ ಹರ್ಷಕುಮಾರ್ ಕೇದಗೆ**ಯವರ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭದಲ್ಲಿ **ಶ್ರೀ ಪಿ. ಪ್ರದೀಪ ಕುಮಾರ್** ಚೇರ್‌ಮ್ಯಾನ್, ಕರ್ಣಾಟಕ ಬ್ಯಾಂಕ್, ಮಂಗಳೂರು ಇವರು **‘ಅವಕಾಶಗಳು ಮತ್ತು ಜವಾಬ್ದಾರಿಗಳು’** ಎಂಬ ಬಗ್ಗೆ ಉಪನ್ಯಾಸ ನೀಡಿದರು.

**ಡಾ| ಶೋಭಿತಾ ಸತೀಶ್,** ಪ್ರಾಂಶುಪಾಲರು ವಿವೇಕಾನಂದ ಕಾಲೇಜ್ ಆಫ್ ಎಜ್ಯುಕೇಶನ್, ಪುತ್ತೂರು ಇವರು **‘ವ್ಯಕ್ತಿತ್ವ ವಿಕಸನದಲ್ಲಿ ಮೌಲ್ಯಗಳ ಪಾತ್ರ’** ಇದರ ಬಗ್ಗೆ ವಿವರಿಸಿದರು. ಬಳಿಕ ಸಂವಾದ ಚರ್ಚಾಗೋಷ್ಠಿ ನಡೆಯಿತು.

**ಶ್ರೀ ಇನ್ನಾ ಚಂದ್ರಕಾಂತ್ ರಾವ್**ರವರು ಮೋಡರೇಟರ್ ಆಗಿ ಗೋಷ್ಠಿಯನ್ನು ಯಶಸ್ವಿಗೊಳಿಸಿದರು.

ಬಳಿಕ ಅರ್ಹ ವಿದ್ಯಾರ್ಥಿಗಳಿಗೆ ಸಹಾಯಧನ ವಿತರಿಸಲಾಯಿತು.

**ಶ್ರೀ ನಾಗರಾಜ್ ಶರ್ಮ** ಅವರ ಧನ್ಯವಾದದೊಂದಿಗೆ ಸಭೆಯು ಮುಕ್ತಾಯಗೊಂಡಿತು.

**ಕಾರ್ಯಕ್ರಮದಲ್ಲಿ ನಮ್ಮ ಸವಾಜದ 185 ವಿದ್ಯಾರ್ಥಿಗಳಿಗೆ ರೂ. 78,77,500 ವಿದ್ಯಾರ್ಥಿವೇತನ ಮತ್ತು ಸಾಲ ವಿದ್ಯಾರ್ಥಿವೇತನ ನೀಡಲಾಯಿತು. ಈ ಯಶಸ್ವಿ ಕಾರ್ಯಕ್ರಮದ ಬೆನ್ನೆಲುಬಾದ ನಮ್ಮ ಸಮಾಜದ ದಾನಿಗಳು ಮತ್ತು ‘ಹಿರಿಯರ ಸ್ಮರಣಾರ್ಥ ವಿದ್ಯಾನಿಧಿ’ಗಳನ್ನು ಸ್ಥಾಪಿಸಿ, ಪ್ರತೀ ವರ್ಷ ಇನ್ನಷ್ಟು ಹೆಚ್ಚಿಸಿ ನಮ್ಮನ್ನು ಬೆಂಬಲಿಸುವ ಮಹನೀಯರುಗಳು. ತಮಗೆಲ್ಲರಿಗೂ ನಮ್ಮ ಅನಂತಾನಂತ ಧನ್ಯವಾದಗಳು. ನಮ್ಮ ಮನವಿಗೆ ಸ್ಪಂದಿಸುವ ತಮ್ಮ ಉದಾತ್ತ ಮನೋಭಾವಕ್ಕೆ ಶ್ರೀ ಗುರುಗಳು ಮತ್ತು ಭಗವಂತನು ಇನ್ನಷ್ಟು ಶಕ್ತಿ ತುಂಬಲಿ ಎಂಬುದು ನಮ್ಮ ಶುಭಹಾರೈಕೆ.**

| ತರಗತಿ | ವಿದ್ಯಾರ್ಥಿಸಂಖ್ಯೆ | ವಿದ್ಯಾರ್ಥಿವೇತನ |
|---|---|---|
| ಪ್ರಾಥಮಿಕ ಶಾಲೆ | 14 | 14,000-00 |
| ಪ್ರೌಢಶಾಲೆ | 27 | 54,000-00 |
| ಪದವಿಪೂರ್ವ | 34 | 1,02,000-00 |
| ಪದವಿ | 49 | 3,67,500-00 |
| ಲೆಕ್ಕಪರಿಶೋಧನಾ (CA) | 1 | 10,000-00 |
| ಸ್ನಾತಕೋತ್ತರ (Ph.D.) | 2 | 20,000-00 |
| ವೇದಾಂತ | 3 | 30,000-00 |
| ಸಾಲ ವಿದ್ಯಾರ್ಥಿವೇತನ | 55 | 72,55,000-0 |
| ಅಂಕಿತ ಅನಂತಪುರ ಅವರಿಂದ 1 ವರ್ಷದ ಅವಧಿಯ ಪ್ರಾಯೋಜಿತ ವಿದ್ಯಾರ್ಥಿವೇತನ | | 25,000-00 |
| **ಒಟ್ಟು : ರೂ.** | | **78,77,500-00** |

## ಪುತ್ತೂರಿನ ‘ಶಿವಸದನ’ಕ್ಕೆ ದಾನಿಗಳಿಂದ ಸಹಾಯಹಸ್ತ



ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘದ ಶ್ರೀ ಸಾಯಿಪ್ರಸಾದ್ ಪುತ್ತೂರು ಮಠದಬೆಟ್ಟುವಿನಲ್ಲಿ ನಿರ್ಮಿಸಿರುವ ‘ಶ್ರೀ ಭಾರತೀ ನಿಲಯ’ದ ನೂತನ ಗೃಹಪ್ರವೇಶದ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ ‘ಶಿವಸದನ’ ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. 25,000 ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಅವರ ಮಾತಾಪಿತರಾದ ಶ್ರೀ ನಾಗೇಶ್ ಶರ್ಮ ಮತ್ತು ಶ್ರೀಮತಿ ಭುವನೇಶ್ವರಿ, ಸಹೋದರ ಶ್ರೀ ಪ್ರಶಾಂತ್ ಶರ್ಮ, ಅತ್ತಿಗೆ ಶ್ರೀಮತಿ ಶುಭಾ ಪ್ರಶಾಂತ್, ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್., ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್ ಉಪಸ್ಥಿತರಿದ್ದರು.

***‘ಶಿವಸದನ’ ವಸತಿ ನಿಲಯವು ಸಮಾಜ ಬಾಂಧವರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿದ್ದು, ದಾನಿಗಳ ಉದಾರ ದೇಣಿಗೆಯನ್ನು ನಿರೀಕ್ಷಿಸುತ್ತಿದ್ದೇವೆ. ದಾನಿಗಳು ವಸ್ತುರೂಪದಲ್ಲೂ ದೇಣಿಗೆ ನೀಡಬಹುದು. ಹಿರಿಯ ನಾಗರಿಕರ ಸಸ್ಯಾಹಾರಿ ವಸತಿ ನಿಲಯದಲ್ಲಿ ಈಗಾಗಲೇ 36ಕ್ಕೂ ಹೆಚ್ಚು ನಿವಾಸಿಗಳಿದ್ದು, ಮಿತದರದಲ್ಲಿ ಎಲ್ಲಾ ಸಸ್ಯಾಹಾರಿಗಳಿಗೆ ಮುಕ್ತವಾಗಿರುತ್ತದೆ. ಅಪೇಕ್ಷಿತರಿಗೆ ಮಾಹಿತಿ ನೀಡಿ ಸಹಕರಿಸಿ.***

**ಶ್ರೀ ಕರುಣ್ ರಾವ್ ಬೆಳ್ಳೆ – 7337634359 ಶ್ರೀ ಪಿ. ಶ್ರೀಕಾಂತ್ ರಾವ್ – 7795116598**

## ಮಂಗಳೂರಿನ ರೋಟರಿ ಕ್ಲಬ್‌ಗಳಿಂದ ಜಂಟಿಯಾಗಿ ಪುತ್ತೂರಿನ ಹಿರಿಯ ನಾಗರಿಕರ ವಸತಿ ನಿಲಯಕ್ಕೆ ನೆರವಿನ ಕೊಡುಗೆ




ಮಂಗಳೂರಿನ ರೋಟರಿ ಕ್ಲಬ್ ಹಿಲ್‌ಸೈಡ್ ಮತ್ತು ರೋಟರಿ ಕ್ಲಬ್ ಡೌನ್ ಟೌನ್ ವತಿಯಿಂದ ಶ್ರೀ ಸುಬ್ರಹ್ಮಣ್ಯ ಸಭಾ ಆಡಳಿತದ ಪುತ್ತೂರಿನ ಹಿರಿಯ ನಾಗರಿಕರ ವಸತಿ ನಿಲಯಕ್ಕೆ ಸುಮಾರು ಒಂದು ಲಕ್ಷ ರೂಪಾಯಿ ಮೌಲ್ಯದ ಗೃಹೋಪಯೋಗಿ ವಸ್ತುಗಳನ್ನು ನೀಡಲಾಯಿತು. ರೋಟರಿ ಕ್ಲಬ್‌ನ ಡಿಜಿಎನ್ ಶ್ರೀ ವಿಕ್ರಮ್ ದತ್ತ, ಶ್ರೀ ಕೆ. ವಿಶ್ವಾಸ್ ಶೆಣೈ, ಶ್ರೀ ಸಭಾದ ಅಧ್ಯಕ್ಷ ಶ್ರೀ ಹರ್ಷಕುಮಾರ್ ಕೇದಗೆ, ಶ್ರೀಮತಿ ಕನಕವಲ್ಲಿ ಹರ್ಷಕುಮಾರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್, ನಿರ್ದೇಶಕ ಶ್ರೀ ಮನೀಶ್ ರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.


**ನಿವೇಶನ ಮಾರಾಟಕ್ಕಿದೆ**

5.4, 4.6, 4 ಸೆಂಟ್ಸ್ ಕನ್ವರ್ಷನ್, ಸಿಂಗಲ್ ಸೈಟ್ ಖಾತ ಆಗಿದ್ದ ರಿಜಿಸ್ಟ್ರೇಶನ್‌ಗೆ ಎಲ್ಲಾ ದಾಖಲಾತಿ ಹೊಂದಿರುವ ಖಾಲಿ ನಿವೇಶನಗಳು ಮಂಗಳೂರು ಬೋಂದೆಲ್ ಚರ್ಚ್ ಬಳಿ ಮಾರಾಟಕ್ಕಿದೆ. ಪಾರ್ಟಿಯಿಂದಲೇ ನೇರ ಮಾರಾಟ. ಬ್ರಾಹ್ಮಣರಿಗೆ ಯಾ ಸಸ್ಯಾಹಾರಿಗಳಿಗೆ ಮೊದಲ ಆದ್ಯತೆ. ಸಂಪರ್ಕಿಸಿ : ✆ **9482024944**






# ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು



ಆಯೋಜನೆಯಲ್ಲಿ

## ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ

ಆಶ್ರಯದಲ್ಲಿ

ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಶ್ರೀ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ,
ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ
ಪರಮಾನುಗ್ರಹದಂತೆ





# ವಿಶ್ವ ಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶ

**ದಿನಾಂಕ : 04 ಮತ್ತು 05 ಮಾರ್ಚ್ 2023 ಶನಿವಾರ ಹಾಗೂ ಆದಿತ್ಯವಾರ ❖ ಸ್ಥಳ : 'ಶ್ರೀ ಸುಬ್ರಹ್ಮಣ್ಯ ಸಭಾಭವನ', ಲ್ಯಾಲ, ಬೆಳ್ತಂಗಡಿ**

### ದಿನಾಂಕ 04-03-2023ನೇ ಶನಿವಾರ ಬೆಳಗ್ಗೆ ಗಂಟೆ 6-30ರಿಂದ

**ಸಾಮೂಹಿಕ ಪ್ರಾರ್ಥನೆ, ಗಣಹೋಮ, ಸುಬ್ರಹ್ಮಣ್ಯ ಹೋಮ, ವೈದಿಕ ಶಿಬಿರ**
(ಆಯೋಜನೆ : ಅಖಿಲ ಸ್ಥಾನಿಕ ಬ್ರಾಹ್ಮಣ ಪುರೋಹಿತ ಅರ್ಚಕ ಪರಿಪಾಲನಾ ಸಭಾ, ಮಂಗಳೂರು)

ಪೂರ್ವಾಹ್ನ ಗಂಟೆ 7-30ರಿಂದ :
**ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಭಜನಾ ಕಾರ್ಯಕ್ರಮ**

ಬೆಳಗ್ಗೆ ಗಂಟೆ 8-30ರಿಂದ 9-45 : **ಸಾಂಸ್ಕೃತಿಕ ಕಾರ್ಯಕ್ರಮ**

### ಉದ್ಘಾಟನಾ ಸಮಾರಂಭ

**(ಬೆಳಗ್ಗೆ ಗಂಟೆ 10–00ರಿಂದ 12–00)**

ಉದ್ಘಾಟಕರು : **ಪದ್ಮವಿಭೂಷಣ ರಾಜರ್ಷಿ ಡಾ| ಡಿ. ವೀರೇಂದ್ರ ಹೆಗ್ಗಡೆ**
ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ ಧರ್ಮಸ್ಥಳ

ಶುಭಾಶಂಸನೆ : **ಶ್ರೀ ಭೀಮೇಶ್ವರ ಜೋಷಿ,** ಧರ್ಮಕರ್ತರು
ಶ್ರೀ ಆದಿಶಕ್ತ್ಯಾತ್ಮಕ ಅನ್ನಪೂರ್ಣೇಶ್ವರಿ ದೇವಸ್ಥಾನ, ಹೊರನಾಡು

ಸಭಾಧ್ಯಕ್ಷತೆ : **ಶ್ರೀ ಎಂ. ದೇವಾನಂದ ಭಟ್, ಬೆಳುವಾಯಿ,** ಅಧ್ಯಕ್ಷರು
ಸ್ಥಾನಿಕ ಬ್ರಾಹ್ಮಣ ಮಹಾಮಂಡಲ (ರಿ.), ಮಂಗಳೂರು

ಸಮ್ಮೇಳನಾಧ್ಯಕ್ಷತೆ : **ಶ್ರೀ ಪಿ. ರಾಧಾಕೃಷ್ಣ ರಾವ್, ಧರ್ಮಸ್ಥಳ,** ಅಧ್ಯಕ್ಷರು
ಶ್ರೀ ಸುಬ್ರಹ್ಮಣ್ಯ ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಬೆಳ್ತಂಗಡಿ

ಮುಖ್ಯ ಅಭ್ಯಾಗತರು : **ಶ್ರೀ ಕೆ. ಪ್ರತಾಪಸಿಂಹ ನಾಯಕ್**
ವಿಧಾನ ಪರಿಷತ್ ಸದಸ್ಯರು, ಕರ್ನಾಟಕ ಸರಕಾರ
**ಶ್ರೀ ಸಚ್ಚಿದಾನಂದಮೂರ್ತಿ,** ಅಧ್ಯಕ್ಷರು
ಕರ್ನಾಟಕ ಬ್ರಾಹ್ಮಣ ಅಭಿವೃದ್ಧಿ ಮಂಡಳಿ, ಬೆಂಗಳೂರು
**ಶ್ರೀ ಪ್ರದೀಪ್ ಕುಮಾರ್ ಪಂಜ**
ಅಧ್ಯಕ್ಷರು, ಕರ್ಣಾಟಕ ಬ್ಯಾಂಕ್ ಲಿ.

— — — **ಸಮಾಜದ ಹಿರಿಯ ಸಾಧಕರಿಗೆ ಸಮ್ಮಾನ** — — —

ಅಪರಾಹ್ನ ಗಂಟೆ 12-30ರಿಂದ ರಾತ್ರಿ ಗಂಟೆ 9-00ರ ವರೆಗೆ :
**ವಿವಿಧ ಸಂಸ್ಥೆಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು**

**ಸಮಾವೇಶಕ್ಕೆ ಧನಸಹಾಯ ನೀಡುವವರು ಈ ಕೆಳಗಿನ ಬ್ಯಾಂಕ್ ಖಾತೆಗೆ ಹಣ ಕಳುಹಿಸುವುದು.**

Shree Subrahmanya Sahakara Sangha (R.)
Bank of Baroda, Belthangady
Current Account : **A/c No. :** 45150200000054
**IFSC Code :** BARB0BELTHA (5th character is zero)

### ದಿನಾಂಕ 05-03-2023ನೇ ಆದಿತ್ಯವಾರ

ಪ್ರಾತಃಕಾಲ 6-30ಕ್ಕೆ : **ಶ್ರೀ ಸತ್ಯನಾರಾಯಣ ಪೂಜೆ**

ಪೂರ್ವಾಹ್ನ ಗಂಟೆ 7-30ರಿಂದ :
**ಬೆಳ್ತಂಗಡಿ ಶ್ರೀ ಸುಬ್ರಹ್ಮಣ್ಯ ಸಭಾದ ವತಿಯಿಂದ ಭಜನಾ ಕಾರ್ಯಕ್ರಮ**

ಬೆಳಗ್ಗೆ ಗಂಟೆ 8-00ರಿಂದ ಅಪರಾಹ್ನ 3-45ರ ವರೆಗೆ : **ಸಾಂಸ್ಕೃತಿಕ ಕಾರ್ಯಕ್ರಮ**

ಸಂಜೆ ಗಂಟೆ 5-00ರಿಂದ

**ಶ್ರೀ ಶೃಂಗೇರಿ ಶ್ರೀ ಶಾರದಾ ಪೀಠಾಧೀಶ್ವರರಾದ ಶ್ರೀಮಜ್ಜಗದ್ಗುರು**
**ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಆಗಮನ**
**ಗುರುವಂದನಾ, ಆಶೀರ್ವಚನ, ಮಂಗಳ ಮಂತ್ರಾಕ್ಷತೆ**

ಉಪಸ್ಥಿತಿ : **ಶ್ರೀ ಹರೀಶ್ ಪೂಂಜ,** ಶಾಸಕರು – ಬೆಳ್ತಂಗಡಿ, ಬೆಳ್ತಂಗಡಿ ಜನತೆಯ ಪರವಾಗಿ
ಶ್ರೀ ಶ್ರೀ ಜಗದ್ಗುರುಗಳವರಿಗೆ ಸ್ವಾಗತ, ಸನ್ಮಾನದ ನೇತೃತ್ವ
**ಶ್ರೀ ವಾಗೀಶ ಶಾಸ್ತ್ರಿ ಪಾವಂಜೆ**
ಧರ್ಮಾಧಿಕಾರಿಗಳು, ಶೃಂಗೇರಿ ಮಠ, ಉಡುಪಿ ಪ್ರಾಂತ್ಯ
**ಶ್ರೀ ಸತ್ಯಶಂಕರ ಬೊಳ್ಳಾವ, ಕೋಟೆಕಾರ್**
ಧರ್ಮಾಧಿಕಾರಿಗಳು, ಶೃಂಗೇರಿ ಮಠ, ಮಂಗಳೂರು ಪ್ರಾಂತ್ಯ

**ಸಮಸ್ತ ಸ್ಥಾನಿಕ ಬ್ರಾಹ್ಮಣ ಸಮಾಜ ಬಾಂಧವರ ವತಿಯಿಂದ**
**ಶ್ರೀ ಶ್ರೀಮಜ್ಜಗದ್ಗುರುಗಳಿಗೆ ಗೌರವದ ಭಿನ್ನವತ್ತಳೆ ಸಮರ್ಪಣೆ**

**'ಸ್ಥಾನಿಕರತ್ನ' ಪ್ರಶಸ್ತಿ ಪ್ರದಾನ**
**ಉಡುಪಿ ಶ್ರೀ ಚಿಟ್ಪಾಡಿ ಸರ್ವೋತ್ತಮ ರಾವ್** ಅವರಿಗೆ
ನಿವೃತ್ತ ಡಿ. ಜಿ. ಎಂ., ಕಾರ್ಪೋರೇಶನ್ ಬ್ಯಾಂಕ್ ಹಾಗೂ ಸ್ಥಾನಿಕ ಸಂಘಗಳ ಮಾಜಿ ಅಧ್ಯಕ್ಷರು

ಸಂಜೆ ಗಂಟೆ 4-00ರಿಂದ 5-00 : **ಸಾಂಸ್ಕೃತಿಕ ಕಾರ್ಯಕ್ರಮ**

ಸಂಜೆ ಗಂಟೆ 7-00ರಿಂದ : **ಸಮಾಜ ಬಾಂಧವರಿಂದ ಯಕ್ಷಗಾನ ಪ್ರದರ್ಶನ**
**'ನೂತನ ಪ್ರಸಂಗ'**

**ಮಹಾಮಂಡಲಕ್ಕೆ ಸದಸ್ಯತ್ವ ನೀಡಿ ಧನಸಹಾಯ ಮಾಡುವವರು**
**ಈ ಕೆಳಗಿನ ಬ್ಯಾಂಕ್ ಖಾತೆಗೆ ಹಣ ಕಳುಹಿಸಬೇಕಾಗಿ ವಿನಂತಿ**

Sthanika Brahmana Mahamandala (R.)
Karnataka Bank, Moodbidri - **A/c. No. :** 4822500102150801
**IFSC Code :** KARB0000482 **MICR :** 575052024


ಪತ್ರಿಕೆಗೆ ಶುಭ ಬಯಸುವ–



**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ಧ್ರುವ್**

**PRAVEEN KUMAR ADYAPADY**
**NOTARY & ADVOCATE**

**MANGALORE OFFICE**
JANVI PLAZA, IInd FLOOR
BUNTS HOSTEL, MANGALORE

**BAJPE OFFICE**
OZANAM COMPLEX, IInd FLOOR
CHURCH BUILDING, MAIN ROAD, BAJPE

0824 - 2254478 (O) 9620392584, 9448724981(M), 2254448 (R)

**We undertakes : Civil, Criminal, Motor Vehicles, A.C., D.C. Cases, Land Conversion, Registration etc.**

## ಶುಭ ವಿವಾಹ

ಆಲಂಕಾರು ಶ್ರೀ ವಸಂತ ಕುಮಾರ್ ಎಚ್. ಮತ್ತು ಶ್ರೀಮತಿ ಸುಶೀಲ ಇವರ ಪುತ್ರ **ಚಿ। ಶ್ರೀಕಾಂತ್** ಹಾಗೂ ಕಟೀಲು ಶ್ರೀ ಬಾಬು ರಾಜೇಂದ್ರಪ್ರಸಾದ್ ಮತ್ತು ಶ್ರೀಮತಿ ಪ್ರೇಮಲತಾರವರ ಪುತ್ರಿ **ಚಿ। ಸೌ। ಶ್ರಾವಣಿ**ಯವರ ವಿವಾಹವು ತಾ. 26-01-2023ನೇ ಗುರುವಾರ ಕಟೀಲು 'ಸಾನಿಧ್ಯ ಸಭಾಭವನ'ದಲ್ಲಿ ನಡೆಯಿತು.

❖❖❖

ಬೊಕ್ಕಸ ಶ್ರೀ ಗಣೇಶ ರಾವ್ ಮತ್ತು ಶ್ರೀಮತಿ ಮಲ್ಲಿಕಾರವರ ಸುಪುತ್ರಿ **ಚಿ। ಸೌ। ಮೇಘನಾ** ಹಾಗೂ ಶ್ರೀ ರಾಜಶೇಖರ ರಾವ್ ಮತ್ತು ಶ್ರೀಮತಿ ರಾಧಿಕಾರವರ ಸುಪುತ್ರ **ಚಿ। ರಕ್ಷಿತ್** ಇವರ ವಿವಾಹಮಂಗಲೋತ್ಸವವು ಮೂಡಬಿದಿರೆ ಬನ್ನಡ್ಕ ಶ್ರೀಗುರು ರಾಘವೇಂದ್ರ ಮಠದ 'ಪಾಂಚಜನ್ಯ ಸಭಾಂಗಣ'ದಲ್ಲಿ ತಾರೀಕು 26–01–2023ನೇ ಗುರುವಾರ ಜರುಗಿತು.

❖❖❖

ಶ್ರೀಮತಿ ಹೇಮಲತಾ ಮತ್ತು ಶ್ರೀ ಅರುಣ್‌ಕುಮಾರ್ ಎಂ. ಎಸ್. ಇವರ ಸುಪುತ್ರ **ಚಿ। ಅಕ್ಷಯ್** ಹಾಗೂ ಶ್ರೀಮತಿ ಶೈಲಜಾ ಮತ್ತು ಶ್ರೀ ರಾಜಕುಮಾರ್ ಇವರ ಸುಪುತ್ರಿ **ಚಿ। ಸೌ। ಸಾಗರಿಕಾ** ಇವರ ವಿವಾಹವು ತಾ. 27-1-2023ನೇ ಶುಕ್ರವಾರ ನೀಲಾವರ 'ಶ್ರೀ ಶಾರದಾ ಸಭಾಭವನ'ದಲ್ಲಿ ನೆರವೇರಿತು.

❖❖❖

ಪರಾರಿ ಶ್ರೀ ಪ್ರದೀಪ್ ವಿ. ರಾವ್ ಮತ್ತು ಶ್ರೀಮತಿ ರೇಖಾ ಇವರ ಸುಪುತ್ರಿ **ಚಿ। ಸೌ। ಸೌಂದರ್ಯಲಕ್ಷ್ಮೀ** ಹಾಗೂ ಪೂವಂದೂರಿನ ಶ್ರೀ ರಾಮಕೃಷ್ಣಯ್ಯ ಮತ್ತು ಶ್ರೀಮತಿ ಯಶೋದ ಇವರ ಸುಪುತ್ರ **ಚಿ। ಶಿವಪ್ರಸಾದ** ಇವರ ವಿವಾಹವು ತಾ. 13-1-2023ನೇ ಶುಕ್ರವಾರ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾಭವನ'ದಲ್ಲಿ ಜರುಗಿತು.

## ವಿಶ್ವಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶ 2023

### ವಧೂ~ವರರ ಸಮಾವೇಶ 2023

ವಿಶ್ವಮಟ್ಟದ ಸ್ಥಾನಿಕ ಬ್ರಾಹ್ಮಣ ಸಮಾವೇಶ 2023 ಮಾರ್ಚ್ 4 ಮತ್ತು 5ರಂದು 'ಶ್ರೀ ಸುಬ್ರಹ್ಮಣ್ಯ ಸಭಾಭವನ', ಲ್ಯಾಲ, ಬೆಳ್ತಂಗಡಿಯಲ್ಲಿ ನಡೆಯಲಿದೆ. ಇದರ ಜೊತೆಗೆ ಮಾರ್ಚ್ 5ರಂದು ಸ್ಥಾನಿಕ ಬ್ರಾಹ್ಮಣ ವಧೂ–ವರರ ಸಮಾವೇಶವೂ ನಡೆಯಲಿದೆ. ಈ ಸಮಾವೇಶದಲ್ಲಿ ಎಲ್ಲರೂ ಭಾಗವಹಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ಚೇತನ್ ಶರ್ಮ, ಮಂಗಳೂರು – 9844187083**

## ಅಪಾರಕೀರ್ತಿ ಗಳಿಸಿ...



ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲೂಕಿನ ನೆಲ್ಯಾಡಿಯಲ್ಲಿ ವಾಸವಾಗಿರುವ ಪಾದೆಬೆಟ್ಟು ಶ್ರೀ ದಿನಕರ ರಾವ್ ಮತ್ತು ಶ್ರೀಮತಿ ವಸಂತಿ ದಂಪತಿಗಳ ಪುತ್ರ ಶ್ರೀ ವಿನಯ ರಾವ್ ಮತ್ತು ಶ್ರೀಮತಿ ಭವ್ಯ ದಂಪತಿಗಳ ಪುತ್ರಿ **ಕು। ಆದ್ಯತಾ ವಿ. ರಾವ್** ನೆಲ್ಯಾಡಿಯ ಜ್ಞಾನೋದಯ ಬೆಥನಿ ಆಂಗ್ಲ ಮಾಧ್ಯಮ ಶಾಲೆಯ 9ನೇ ತರಗತಿಯ ವಿದ್ಯಾರ್ಥಿನಿ ಪ್ರದರ್ಶಿಸಿದ ಜೈವಿಕ ಸಿಮೆಂಟ್ ಮಾದರಿಯು ಚಿನ್ನದ ಪದಕದೊಂದಿಗೆ ರಾಜ್ಯಮಟ್ಟದಲ್ಲಿ ಆಯ್ಕೆಯಾಗಿ ಗುಜರಾತ್‌ನ ರಾಜ್‌ಕೋಟ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಇಂಡಿಯನ್ ಸೈನ್ಸ್ ಮತ್ತು ಇಂಜಿನಿಯರಿಂಗ್ ಫೇರ್ (INSEF)ನಲ್ಲಿ ಕಂಚಿನ ಪದಕ ಲಭಿಸಿರುತ್ತದೆ.

## ಉಪನಯನ

ಶ್ರೀಮತಿ ಸ್ವಾತಿ ಮತ್ತು ಶ್ರೀ ಪ್ರಮೋದ್ ಕುಮಾರ್ ಕೇದಗೆ ಇವರ ಸುಪುತ್ರ **ಚಿ। ಹಾರ್ದಿಕ್ ಕುಮಾರ್**ನ ಬ್ರಹ್ಮೋಪದೇಶವು ತಾ. 10–2–2023ನೇ ಶುಕ್ರವಾರ ಮಂಗಳೂರಿನ 'ಶ್ರೀ ಸುಬ್ರಹ್ಮಣ್ಯ ಸಭಾ'ದ ಸಭಾಂಗಣದಲ್ಲಿ ನೆರವೇರಿತು.

❖ ❖ ❖

ಹೆಜಮಾಡಿ ಶ್ರೀ ಪವನ್ ಕುಮಾರ್ ಮತ್ತು ಶ್ರೀಮತಿ ಅಕ್ಷತಾರವರ ಸುಪುತ್ರ **ಚಿ। ಸ್ಕಂದ ಕುಮಾರ್**ನ ಬ್ರಹ್ಮೋಪದೇಶ ತಾರೀಕು 16-01-2023ನೇ ಸೋಮವಾರ ಬೆಂಗಳೂರಿನ 'ಜ್ಞಾನಶಕ್ತಿ ಮಂಟಪ'ದಲ್ಲಿ ನೆರವೇರಿತು.

## ಗೃಹಪ್ರವೇಶ

ಶ್ರೀ ಎಂ. ನಾಗೇಶ್ ಶರ್ಮ ಮತ್ತು ಶ್ರೀಮತಿ ಭುವನೇಶ್ವರಿ ಹಾಗೂ ಮಕ್ಕಳು ಪುತ್ತೂರಿನ ಮಠದಬೆಟ್ಟುವಿನಲ್ಲಿ ನೂತನವಾಗಿ ನಿರ್ಮಿಸಿರುವ **'ಶ್ರೀ ಭಾರತೀ ನಿಲಯ'** ಇದರ ಗೃಹಪ್ರವೇಶವು ತಾರೀಕು 09–02–2023ನೇ ಗುರುವಾರ ನಡೆಯಿತು.

❖❖❖

ಶ್ರೀ ಶಿವಾಜಿ ಎಸ್. ರಾವ್ ಮತ್ತು ಶ್ರೀಮತಿ ಅರುಣಾ ಎಸ್. ರಾವ್ ಮಂಗಳೂರಿನ ಬೋಂದೆಲ್‌ನಲ್ಲಿ ನೂತನವಾಗಿ ನಿರ್ಮಿಸಿರುವ **'ದೇವೀ ಕೃಪಾ'**ದ ಗೃಹಪ್ರವೇಶವು ತಾ. 23–01–2023ನೇ ಸೋಮವಾರ ನಡೆಯಿತು.

ಪತ್ರಿಕೆಗೆ ಶುಭ ಬಯಸುವ–
ಶ್ರೀಮತಿ ಕುಸುಮಾ ನವೀನ್ ಕುಮಾರ್ ಮಂಗಳೂರು
ಶ್ರೀಮತಿ ರೇಷ್ಮ ವಸಂತ ಕುಮಾರ್, ಶ್ರೀ ಅನೀಶ್ ರಾವ್ ಉಡುಪಿ
ಶ್ರೀಮತಿ ಸುಷ್ಮ ಶಿವಾನಂದ ರಾವ್, ಶ್ರೀ ಅಂಜನ್ ರಾವ್ ದುಬೈ

ಪತ್ರಿಕೆಗೆ ಶುಭ ಬಯಸುವ–
ಶ್ರೀ ನಾಗರಾಜ್ ಶರ್ಮ
ಹಾಗೂ
ಶ್ರೀಮತಿ ಆರತಿ ಶರ್ಮ
'ಶರ್ಮ', ನಾಗನಕಟ್ಟೆ ಹತ್ತಿರ, ಮುಂಡಾನ, ಕದ್ರಿ ಕಂಬಳ ರಸ್ತೆ
ಮಂಗಳೂರು - 575 002 ✆ : 9880258216

Manish Rao U.
Tel : (O) 2223301
Mobile : 9448726499 / 8884284939
NAVA COMPUTERS
Dealers in : C. C. Camera, Theft Alarm, Remote Locks
Computers Hardware and Peripherals
Computer Sales & Services
1st Floor, Bharath Building, P. M. Rao Road, Hampankatta, Mangaluru - 575 001

PREETHIKA AUTOMOBILES
✆ 2493633 9845851573
Wholesale & Retail Dealers in :
2 & 3 WHEELERS, SPARES & ACCESSORIES
KARANGALPADY, MANGALORE - 575 003
Dealers in :
Minda Switches, M. K. Products, Swiss Auto Products, Power Coils

ರಾಮಾ ಅಟೋಮೊಬೈಲ್ಸ್
ಮಾರುತಿ ವಾಹನ ತಜ್ಞರು
ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006
ಫೋನ್ : 0824 - 2454355, ಮೊಬೈಲ್ : 9448545702
ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ

ಪತ್ರಿಕೆಗೆ ಶುಭ ಬಯಸುವ–
ಡಾ. ದಿವಾಕರ್ ರಾವ್ ಹಾಗೂ
ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ
ಮೌರಿಷ್ಕ ಪ್ಯಾಲೇಸ್, ಸಿ. ವಿ. ನಾಯಕ್ ಹಾಲ್ ಬಳಿ
ಕದ್ರಿ, ಮಂಗಳೂರು - 575 003

# ಹರಿಕಥೆಯ ದಂತಕಥೆ ಪದ್ಮಾವತಿ ಬಾಯಿ ಸಿದ್ಧಿ ಸಾಧನೆ ಯುವಜನಾಂಗಕ್ಕೆ ಸ್ಫೂರ್ತಿ - ಮುಳಿಯ ಕೇಶವ ಪ್ರಸಾದ್

ಜನವರಿ 30 ಹರಿಕೀರ್ತನಾ ಕ್ಷೇತ್ರದಲ್ಲಿ ದಂತಕಥೆಯಾಗಿ ತನ್ನ ಬಾಲ್ಯದ ಬದುಕಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಪೂಜ್ಯ ಮಂಜಯ್ಯ ಹೆಗ್ಗಡೆಯವರ ಕಾಲದಲ್ಲಿ ಸೀತಾ ಕಲ್ಯಾಣ ಹರಿಕಥಾ ಸೇವೆ ಮಾಡಿ ಪೂಜ್ಯರಿಂದ ಚಿನ್ನದ ಗುಲಾಬಿ – ಚೂಡಾಮಣಿಯಿಂದ ಆಶೀರ್ವದಿಸಲ್ಪಟ್ಟಿದ್ದರು. ಶ್ರೀ ಕ್ಷೇತ್ರ ಪೊಳಲಿಯಲ್ಲಿ 2 ಆಣೆ ಟಿಕೆಟ್ ಮಾರಾಟ ಆದಾಯದಿಂದ 1 ಆಣೆಯನ್ನು ಪೊಳಲಿ ವಿದ್ಯಾ ವಿಲಾಸ ಮತ್ತು ಗುರುಪುರ ಪೊಳಲಿ ಖಾಸಗಿ ರಸ್ತೆಯ ದುರಸ್ತಿ ಬಗ್ಗೆ ವಿನಿಯೋಗಿಸಲ್ಪಟ್ಟಿರುವುದು ಅವರ ಸಾಮಾಜಿಕ ಕಳಕಳಿಗೆ ನಿದರ್ಶನ. ಇವರ ಸಿದ್ಧಿ–ಸಾಧನೆ ಯುವಜನಾಂಗಕ್ಕೆ ಸ್ಫೂರ್ತಿಯಾಗಬೇಕೆಂದು ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಆಡಳಿತ ಧರ್ಮದರ್ಶಿ ಶ್ರೀ ಕೇಶವ ಪ್ರಸಾದ್ ಮುಳಿಯ ಅವರು ಪದ್ಮಾವತಿ, ಪುತ್ರಿ ವಿಜಯಲಕ್ಷ್ಮೀ ನಂದಳಿಕೆ ಮತ್ತು ಮೊಮ್ಮಗಳು ಸೌಜನ್ಯ ನಂದಳಿಕೆ ಸಂಪಾದಿಸಿದ 'ಶತದಳಪದ್ಮ' ಸಂಸ್ಮರಣ ಗ್ರಂಥವನ್ನು ಹಾಗೂ ಬೆಳ್ಳಿ ನಾಣ್ಯ ಹಾಗೂ ಶೇಣಿ ಮುರಳಿ ನಿರ್ದೇಶಿಸಿದ ಹರಿಕಥೆಯ ದಂತಕಥೆ ಪದ್ಮಾವತಿ ಬಾಯಿ ಸಾಕ್ಷ್ಯಚಿತ್ರ ಲೋಕಾರ್ಪಣೆ ಮಾಡಿ ಉದ್ಘಾಟನಾ ಭಾಷಣ ಮಾಡಿದರು.

ಪುತ್ತೂರು ಅಂಚೆ ಕಛೇರಿಯ ಹಿರಿಯ ಅಧೀಕ್ಷಕಿ ಡಾ। ಏಂಜಲ್ ರಾಜ್ ಅವರು ಭಾರತ ಸರಕಾರದ ಅಂಚೆ ಇಲಾಖೆ ಮಾನ್ಯತೆಯ ವಿಶೇಷ ಅಂಚೆ ಲಕೋಟೆ, ಮೈ ಸ್ಟ್ಯಾಂಪ್ ಗೌರವ ಅಂಚೆ ಚೀಟಿ ಅನಾವರಣಗೈದರು. ಹರಿಕಥಾ ಕ್ಷೇತ್ರದಲ್ಲಿ ಬಾಲ್ಯದ ದಿನಗಳಲ್ಲಿ ಅನುಪಮ ಸಾಧನೆ ಮಾಡಿ ಡಾ। ಶಿವರಾಮ ಕಾರಂತರಿಂದ ಭದ್ರಗಿರಿ ಅಚ್ಚುತ ದಾಸರಿಂದ ಪ್ರಶಂಸಿಸಲ್ಪಟ್ಟ ಪದ್ಮಾವತಿಯವರ ವಿಶೇಷ ಅಂಚೆ ಲಕೋಟೆ ಪುತ್ತೂರು ಅಂಚೆ ಕಛೇರಿಯಲ್ಲಿ ಬಿಡುಗಡೆಯಾಗುತ್ತಿರುವುದು ನಮಗೆಲ್ಲಾ ಹೆಮ್ಮೆಯ, ಅಭಿಮಾನದ ಸಂಗತಿಯೆಂದರು.

ಅಧ್ಯಕ್ಷತೆ ವಹಿಸಿದ ಪುತ್ತೂರು ನಗರಸಭೆಯ ಅಧ್ಯಕ್ಷ ಶ್ರೀ ಜೀವಂಧರ್ ಜೈನ್ ಮಾತನಾಡಿ ಇಂತಹ ಸಾಧಕರ ಮಾರ್ಗ ಎಂದು ನಾಮಕರಣ ಮಾಡಲು ನಗರಸಭೆ ಹೆಮ್ಮೆಪಡುತ್ತಿದೆ ಎಂದರು. ಮುಖ್ಯ ಅತಿಥಿಯಾಗಿ ಭಾಗವಹಿಸಿದ ಕೊಂಬೆಟ್ಟು ವಾರ್ಡ್‌ನ ಕಾರ್ಪೋರೇಟರ್ ಶ್ರೀ ಪಿ. ಜೆ. ಜಗನ್ನಿವಾಸ ರಾವ್ ಹಾಗೂ ಹಿರಿಯ ಚೆಂಡೆ ವಾದಕ ಪದ್ಯಾಣ ಶ್ರೀ ಶಂಕರನಾರಾಯಣ ಭಟ್ ಅವರು 'ಹರಿಕೀರ್ತನಾ ವಿದುಷಿ ಶ್ರೀಮತಿ ಎಂ. ಪದ್ಮಾವತಿ ಎಸ್. ರಾವ್ ಮಾರ್ಗ'



ನಾಮಫಲಕವನ್ನು ಅನಾವರಣಗೈದರು. ಶ್ರೀಮತಿ ಪದ್ಮಾವತಿ ಎಸ್. ರಾವ್ ಅವರ ಹಿರಿಯ ಪುತ್ರ, ಸಹೋದರರು, ಸಹೋದರಿಯರು ಹಾಗೂ ಮೊಮ್ಮಕ್ಕಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಇಲಾಖಾ ವತಿಯಿಂದ ಹಿರಿಯ ಪುತ್ರ ಶ್ರೀ ಎಂ. ಗಂಗಾಧರ ರಾವ್ ಅವರನ್ನು ಶಾಲು ಹೊದಿಸಿ, ಪೇಟ ತೊಡಿಸಿ, ಸ್ಮರಣಿಕೆ ನೀಡಿ ಸನ್ಮಾನಿಸಲಾಯಿತು. ವಿಶೇಷ ಅಂಚೆ ಲಕೋಟೆ ಮೈ ಸ್ಟ್ಯಾಂಪ್ ಗೌರವ, ಬೆಳ್ಳಿ ನಾಣ್ಯ ಸಾಕ್ಷ್ಯಚಿತ್ರ ಹಾಗೂ ಶತದಳಪದ್ಮ ಸಂಸ್ಮರಣಾ ಗ್ರಂಥದ ಸಂಪಾದಕಿಯಾಗಿ ವಿಶೇಷ ಶ್ರಮಿಸಿದ ಪದ್ಮಾವತಿ ಪುತ್ರಿ ಶ್ರೀಮತಿ ವಿಜಯಲಕ್ಷ್ಮೀ ನಂದಳಿಕೆ, ಮೊಮ್ಮಗಳು ಸೌಜನ್ಯ ನಂದಳಿಕೆ ಅವರನ್ನು ಕುಟುಂಬದ ಸದಸ್ಯರ ಸಮಕ್ಷಮದಲ್ಲಿ ಚಿನ್ನದ ಉಂಗುರ ನೀಡಿ ಸನ್ಮಾನಿಸಲಾಯಿತು. ಪುತ್ರರಾದ ಶ್ರೀ ಎಂ. ಶಾಂತಾರಾಮ್ ರಾವ್ ಸ್ವಾಗತಿಸಿದರು. ಶ್ರೀ ಎಂ. ಚಂದ್ರಶೇಖರ್ ರಾವ್ ಸಂದೇಶವಾಚನಗೈದರು. ಶ್ರೀಮತಿ ವಿಜಯಲಕ್ಷ್ಮೀ ನಂದಳಿಕೆ ಹಾಗೂ ಸೌಜನ್ಯ ನಂದಳಿಕೆ ಹರಿಕಥಾಶೈಲಿ ಪ್ರಾರ್ಥನೆಗೈದರು. ಹಿರಿಯ ಪುತ್ರಿ ಶ್ರೀಮತಿ ಜಾನಕಿ ರಾಮಸ್ವಾಮಿ ಹಾಗೂ ಮೊಮ್ಮಗ ಶ್ರೀ ಮಹೇಶ್ ಮಾರ್ಪಳ್ಳಿ ಅತಿಥಿಗಳನ್ನು ಗೌರವಿಸಿದರು. ಪುತ್ರ ಡಾ। ಎಂ. ರಾಮಕೃಷ್ಣ ರಾವ್ ವಂದಿಸಿದರು. ಅಳಿಯ ನಂದಳಿಕೆ ಶ್ರೀ ಬಾಲಚಂದ್ರ ರಾವ್ ಹಾಗೂ ಪುತ್ರ ಡಾ। ಎಂ. ಗುರುಪ್ರಸಾದ್ ರಾವ್ ಕಾರ್ಯಕ್ರಮ ನಿರೂಪಿಸಿದರು.

**ನಂದಳಿಕೆ ಬಾಲಚಂದ್ರ ರಾವ್ ✆ : 9448144495**




**PRAMOD**
**AUTOMOBILES**
30 Years of Service
KARANGALPADY
MANGALORE- 575 003
Ph. : 2493633 (O)
2212723 (R)
M. : 9448260225
Wholesale & Retail Dealers in
2 & 3 WHEELERS SPARES & ACCESSORIES
Prop. : Ln. K. HARSHA KUMAR

Muralidhara Rao Adyapadi
Proprietor
Mob : 94480 27259
99803 16434



**SPANDANA**
Constructions
IInd Floor (202)
'Yashodharathna', Sai Sharada Apts.
Near Sharada Vidyalaya, Kodialbail , Mangaluru - 3
CUSTOMER'S SATISFACTION IS OUR MOTTO

ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
ಮತ್ತು
**ಶ್ರೀಮತಿ ಅರುಣಾ ಸೋಮಶೇಖರನ್**
ಚಿಲಿಂಬಿ, ಮಂಗಳೂರು

ಪತ್ರಿಕೆಗೆ ಶುಭ ಬಯಸುವ –
**ಇನ್ನ ಶ್ರೀನಿವಾಸ ರಾವ್ ಹಾಗೂ**
**ಶ್ರೀಮತಿ ಪುಷ್ಪಾವತಿ ಶ್ರೀನಿವಾಸ ರಾವ್**
**ಮತ್ತು ಕುಟುಂಬ**
ಶ್ರೀ ಗಣೇಶ ಕೃಪಾ, ಪೃಥ್ವೀ ಲೇ ಔಟ್, ಕೂಳೂರು, ಮಂಗಳೂರು - 575 013

ಪತ್ರಿಕೆಗೆ ಶುಭ ಬಯಸುವ–
ಮೊಬೈಲ್ : 9972989678
9448104174
**ರವಿಕಿರಣ್ ಕ್ಯೊಲ,** ಬಿ.ಎ., ಎಲ್‌ಎಲ್.ಬಿ.
ವಕೀಲರು ಮತ್ತು ದ. ಕ. ಜಿಲ್ಲಾ ನೋಟರಿ (ಭಾರತ ಸರ್ಕಾರ)
2ನೇ ಮಹಡಿ, ಕಾಮತ್ ಕಟ್ಟಡ, ಉಪ್ಪಿನಂಗಡಿ
ಪುತ್ತೂರು ತಾಲೂಕು, ದ. ಕ., 574 241

Phone : 0824 - 2440110, 2213946
**VISHRAM MOTORS (P.) LTD.**
No. 4, Kodialbail Church Building
K. S. Rao Road, MANGALORE - 575 003
*Authorised Dealers for :*
Vijai Super GP 150 &
Vikram 3 Wheelers (Petrol & Diesel)



## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ವಿದ್ಯಾನಿಧಿ ಸ್ಥಾಪನೆ



**ಕಾಂತಾವರ ಶ್ರೀ ಜಯಪ್ರಕಾಶ್ ತಮ್ಮ 80ನೇ ವರ್ಷದ ಸವಿನೆನಪಿಗಾಗಿ ತಾವು ಈ ಹಿಂದೆ ಸ್ಥಾಪಿಸಿರುವ ವಿದ್ಯಾನಿಧಿಗೆ ರೂಪ್ಯಾ 1,00,000/- (ಒಂದು ಲಕ್ಷ) ನೀಡಿದ್ದಾರೆ.**

**ಈ ಸಂದರ್ಭ ಅವರ ಧರ್ಮಪತ್ನಿ ಶ್ರೀಮತಿ ಶ್ರೀಲತಾ, ಮೊಮ್ಮಗಳು ನಿವೇದ ಉಪಸ್ಥಿತರಿದ್ದರು.**

**ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು.**

## ಶ್ರೀ ಚಂದ್ರಕಾಂತ್ ರಾವ್ ಶ್ರೇಷ್ಠ ಕೃಷಿಕ




ಕಾರ್ಕಳ ತಾಲೂಕಿನ ಇನ್ನಾ ಗ್ರಾಮದ ಪ್ರಗತಿಪರ ಕೃಷಿಕ ಚಂದ್ರಕಾಂತ್ ರಾವ್ ಅವರಿಗೆ 'ಶ್ರೇಷ್ಠ ಕೃಷಿಕ ಪ್ರಶಸ್ತಿ' ದೊರೆತಿದೆ. 2022-23ನೇ ಸಾಲಿನ ಆತ್ಮ ಯೋಜನೆಯಡಿ ತೋಟಗಾರಿಕಾ ವಿಭಾಗದಲ್ಲಿ ಉಡುಪಿ ಜಿಲ್ಲಾಮಟ್ಟದ ಶ್ರೇಷ್ಠ ಕೃಷಿಕ ಪ್ರಶಸ್ತಿಗೆ ಇವರು ಆಯ್ಕೆಯಾಗಿದ್ದಾರೆ. ಜನವರಿ 26ರಂದು ನಡೆದ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗಿದೆ.

ಸುರತ್ಕಲ್ ಕೆಆರ್ಇಸಿಯಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್‌ನಲ್ಲಿ ಮೊದಲ ರ್‍ಯಾಂಕ್ ಗಳಿಸಿದ ಇನ್ನಾ ಚಂದ್ರಕಾಂತ್ ರಾವ್, ಬಿರ್ಲಾ ಕಂಪನಿಯ ಸಿಂಗಪೂರ್ ವಿಭಾಗದ ಮುಖ್ಯಸ್ಥರಾಗಿದ್ದವರು. ಸದ್ಯ ಇನ್ನಾ ಗ್ರಾಮದಲ್ಲಿ ನೆಲೆಸಿದ್ದಾರೆ. ಪ್ರಗತಿಪರ ಕೃಷಿಕರಾಗಿ ಗುರುತಿಸಿಕೊಂಡಿದ್ದಾರೆ.

ಇನ್ನಾದಲ್ಲಿ ಅವರು ನಿರ್ಮಿಸಿರುವ 'ಸುಖಾಂತಾಯ್' ಹೆಸರಿನ ಥೈಲ್ಯಾಂಡ್ ವುಡ್ ಹೌಸ್ ಭಾರಿ ಸುದ್ದಿ ಮಾಡಿತ್ತು. ಪ್ರವಾಸಿತಾಣವಾಗಿಯೂ ಗುರುತಿಸಿಕೊಂಡಿದೆ. ಮನೆಯ ಪ್ರತಿಯೊಂದು ವಸ್ತುವನ್ನು ಥೈಲ್ಯಾಂಡ್‌ನಿಂದಲೇ ತರಿಸಿಕೊಳ್ಳಲಾಗಿದೆ.

ಕೃಷಿ ಚಟುವಟಿಕೆಗಳಲ್ಲಿ ಅತೀವ ಆಸಕ್ತಿ ಹೊಂದಿರುವ ಅವರು ಇನ್ನಾದಲ್ಲೇ ಕೃಷಿ ಕ್ರಾಂತಿಯನ್ನೇ ಮಾಡಿದ್ದಾರೆ. ಜೊತೆಗೆ ವಿವಿಧ ಬಗೆಯ ಹಣ್ಣು, ತರಕಾರಿಗಳನ್ನು ಬೆಳೆಯುತ್ತಿದ್ದಾರೆ. ಬಿಡುವಿನ ವೇಳೆ ಇಂಜಿನಿಯರಿಂಗ್ ಕಾಲೇಜುಗಳಿಗೆ ಸಲಹೆಗಾರರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಬೌದ್ಧಿಕ ನೆಮ್ಮದಿ ಮತ್ತು ಇಂಟಲೆಕ್ಚುವಲ್ ಅಚೀವ್‌ಮೆಂಟ್‌ಗಳಿಗಾಗಿ ಸದಾ ಹಂಬಲಿಸುತ್ತಿರುವ ಇನ್ನಾ ಚಂದ್ರಕಾಂತ್ ರಾವ್ ಅವರದ್ದು ಸರಳ ಮತ್ತು ಸೌಜನ್ಯದ ವ್ಯಕ್ತಿತ್ವ.

## ಅಲ್ಲಿದೆ ನಮ್ಮನೆ... ಇಲ್ಲಿರುವುದು ಸುಮ್ಮನೆ...




**ಡಾ। ಇನ್ನಾ ಜ್ಞಾನೇಶ್ವರ್ ರಾವ್** (75) ತಾ. 17-01-2023ನೇ ಮಂಗಳವಾರ ಮಹಾರಾಷ್ಟ್ರದ ಥಾಣೆಯಲ್ಲಿ ನಿಧನ ಹೊಂದಿದರು. ಇವರು ಓರ್ವ ಪುತ್ರ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

* * *



**ನೆಡ್ಯಾಳ ಶ್ರೀ ಭಾಸ್ಕರ ರಾವ್** (75) ತಾ. 25-01-2023ರ ಬುಧವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಮಗ, ಓರ್ವ ಮಗಳು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

* * *



**ಶ್ರೀ ಹರಿಕರ್ ಎ. ಸುಬ್ರಹ್ಮಣ್ಯನ್** (75) ತಾ. 02–02–2023ರ ಗುರುವಾರ ಬೆಂಗಳೂರಲ್ಲಿ ನಿಧನ ಹೊಂದಿದರು. ಅವರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.



**ಶ್ರೀಮತಿ ಅಮೃತಾ ಜೋಷಿ** (66) ತಾ. 30-01-2023ನೇ ಸೋಮವಾರ ಬೆಂಗಳೂರಿನಲ್ಲಿ ನಿಧನ ಹೊಂದಿದರು. ಅವರು ಪತಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

* * *



ನಂದಳಿಕೆ ಬಡಗುಮನೆ ಫ್ಯಾಮಿಲಿಯ **ಶ್ರೀಮತಿ ಸುಮತಿ ಎಸ್. ರಾವ್** (84) ಅವರು ತಾ. 01-02-2023ನೇ ಬುಧವಾರ ಬಜಗೋಳಿ ಕಾರ್ಕಳದ ತಮ್ಮ ಸ್ವಗೃಹದಲ್ಲಿ ನಿಧನ ಹೊಂದಿದರು. ಇಬ್ಬರು ಗಂಡು ಮಕ್ಕಳು, ಒಬ್ಬಳು ಮಗಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧುಗಳನ್ನು ಅಗಲಿರುತ್ತಾರೆ.

* * *



**ಕಳತ್ತೂರು ಶ್ರೀ ಶ್ರೀನಿವಾಸ್ ಶಾನುಭೋಗ್** (91) ತಾ. 02-02-2023ರ ಗುರುವಾರ ನಾಸಿಕ್‌ನಲ್ಲಿ ನಿಧನ ಹೊಂದಿದರು. ಅವರು ಓರ್ವ ಪುತ್ರ ಹಾಗೂ ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.




ಪಡುಬಿದ್ರೆ ದಿ। ಎನ್. ಪದ್ಮರಾಜ್ ರಾವ್‌ರವರ ಧರ್ಮಪತ್ನಿ **ಶ್ರೀಮತಿ ಸುಮತಿ ರಾವ್** (75) ತಾರೀಕು 15-01-2023ರ ರವಿವಾರ ನಿಧನ ಹೊಂದಿದರು. ಇವರು ಹುಬ್ಬಳ್ಳಿಯಲ್ಲಿ ಹಲವಾರು ವರ್ಷ ಹೈಸ್ಕೂಲ್ ಮುಖ್ಯೋಪಾಧ್ಯಾಯಿನಿಯಾಗಿ ಸೇವೆ ಸಲ್ಲಿಸಿದ್ದರು. ಇವರು ಇಬ್ಬರು ಪುತ್ರರು, ಓರ್ವ ಮಗಳು ಸೇರಿದಂತೆ ಅಪಾರ ಬಂಧು–ಬಾಂಧವರನ್ನು ಅಗಲಿದ್ದಾರೆ.

Sharekhan
Your guide to the financial jungle
EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT
Pradeep Rao K.
NAVADURGA FINANCIALS
Ph: 0824-2412905, 2441318 Mobile: 94481 91028

ಜ್ಞಾನಾರ್ಜನೆಯ ಗುರಿಯೊಂದಿಗೆ
'ಜ್ಞಾನ ಶಕ್ತಿ'ಯು ಸಮಾಜದ ಶಕ್ತಿಯಾಗಿ, ಶಾಶ್ವತವಾಗಿ ಬಾಳಿ ಬೆಳಗಲಿ!
ಶುಭಾಶಯಗಳೊಂದಿಗೆ -
G. K. KOLPE
House No. 7-3-31-D1,'Vaishnavi' (Upstairs)
Vadiraja 2nd Cross, Bailakere, Udupi - 576 101
Mobile : 9449903002

# ಸ್ಕಂದಪು ಚಾರಣ





ದೇಶ ಸುತ್ತುವವರು ಹಲವರು. ಪ್ರಕೃತಿಯ ರಮಣೀಯತೆಯ ಸೊಬಗನ್ನು ಬಗೆ ಬಗೆದು ಉಣ್ಣುವುದಕ್ಕೆಳಸುವವರು ಇನ್ನು ಹಲವರು. ಅಂತಹ ಷಡ್ರಸೋಪೇತ ಭೋಜನಕ್ಕೆ ಸಂವಾದಿಯಾದ ಪ್ರಕೃತಿ ಮಾತೆಯ ಅಗಾಧತೆಯ ಅರಿವು ಮಾಡಿಸಿಕೊಳ್ಳಬೇಕಾದರೆ ಚಾರಣವು ಹೆಚ್ಚು ಅನುಕೂಲ ಕಲ್ಪಿಸಿ ಕೊಡುತ್ತದೆ. ಹೀಗೆ ಕಾಶ್ಮೀರಪುರವಾಸಿನಿಯು ಚರಣಸ್ಪರ್ಶ ಮಾಡಿ, ಮಹಾತಾಯಿಯ ದರ್ಶನಕ್ಕೆ ಹೊರಟ ಸನ್ಮಿತ್ರರ 13 ಮಂದಿಗಳ ಗಡಣ ನಮ್ಮದು. ಹೀಗೆ ಚಾರಣದ ಉದ್ದೇಶದಿಂದ ಹೋಗಿ ಹಿಂದಿರುಗಿದ ಬಳಿಕ ಅಂತಹ ಚಾರಣ ಕಥನ ಸಂಕೀರ್ತನೆಯನ್ನು ದಾಖಲಿಸಿಡುವುದು ಚಾರಣಕ್ಕೆ ಹೋದ ಹಲವರಲ್ಲಿ ಕೆಲವರು ಮಾತ್ರ. ನಾನು ಇಲ್ಲಿ ದಾಖಲಿಸಬಯಸುವ ನನ್ನ ಸೀಮಿತ ಸಾಹಿತ್ಯದ ಬರವಣಿಗೆಯು ಇನ್ನೊಂದು ಪ್ರಕೃತಿಯ ಮಗುವನ್ನು ಚಾರಣಕ್ಕೆ ಪ್ರೇರೇಪಿಸಿ ಮುಂದಡಿಯಿರಿಸುವುದಕ್ಕೆ ಕಾರಣವಾದರೆ ನನ್ನ ದಾಖಲೀಕರಣ ಸಾರ್ಥಕ ಎಂದು ನಾನು ಪರಿಭಾವಿಸಿ ಕಥನ ಕುತೂಹಲವನ್ನು ಹಚ್ಚಿ, ಮುಂದಡಿಯಿರಿಸುವೆನು.

ನನ್ನ ಚಾರಣಕುಟುಂಬದ ಹತ್ತಾರು ಸದಸ್ಯರೊಂದಿಗೆ ನಾನೂ ಇತ್ತೀಚೆಗೆ ಹೋಗಿ ನೋಡಿ ಬಂದ ಸ್ಕಂದಪು ದರ್ಶನ ಮಾಡಿಸಲು ಯಥಾಸಾಧ್ಯ ಅಕ್ಷರ ಕಟ್ಟುವ ಕೆಲಸ ಮಾಡುತ್ತೇನೆ. [ಸ್ಕಂದಪು – ನಮ್ಮ ಆಯ್ಕೆಯ ಹಿಮಾಲಯ ಶ್ರೇಣಿಯೊಂದಕ್ಕೆ ನೇಪಾಳಿ ಭಾಷೆಯ ನಾಮಧೇಯ]

ವರ್ಷಕ್ಕೊಂದಾವರ್ತಿಯಾದರೂ ಚಾರಣ ತೆರಳುತ್ತಿದ್ದ ನಾವು ಈ ಸಲದ ನಮ್ಮ ಚಾರಣಕ್ಕೆ ಆಯ್ಕೆ ಮಾಡಿದ್ದು ಚಳಿಗಾಲದ ಭಾರತ ಮತ್ತು ನೇಪಾಳ ಗಡಿಯಲ್ಲಿರುವ ಸ್ಕಂದಪು ಪರ್ವತ ಶ್ರೇಣಿಯ ಅಗಾಧತೆಯನ್ನು ನಮ್ಮ ಮನಃಪಠಲದಲ್ಲಿ ಅಚ್ಚೊತ್ತಿಸುವ ಮಹದಾಸೆಯೊಂದಿಗೆ. 2022ರ ಫೆಬ್ರವರಿ ತಿಂಗಳ ಮೊದಲ ವಾರ ಅದು. ನಮ್ಮ ಚಾರಣ ತಂಡ 'ಟ್ರಕ್ಕರ್ಸ್' ಮಂಗಳೂರಿನಿಂದ ಬೆಂಗಳೂರು ಮಾರ್ಗವಾಗಿ ವಿಮಾನದ ಮೂಲಕ ಬಾಗ್‌ಡೊಗ್ರ ನಿಲ್ದಾಣ ತಲುಪುವ ಗುರಿಯಿತ್ತು. ಹವಾಮಾನದ ವೈಪರೀತ್ಯದಿಂದಾಗಿ ಗಮ್ಯಸ್ಥಾನ ತಲುಪುವಾಗ ಸಾಕಷ್ಟು ರಾತ್ರಿಯಾಗಿತ್ತು. ಸ್ಕಂದಪು ಚಾರಣವು ಅತೀ ಹೆಚ್ಚು ಬೇಡಿಕೆಯಲ್ಲಿರುವ ಚಾರಣಗಳಲ್ಲಿ ಒಂದು. ಏಕೆಂದರೆ ಇದು ತಿಸ್ತಾ ನದಿಯ ಉದ್ದಕ್ಕೂ ಚಾಚಿಕೊಂಡಿರುವ ಮನಮೋಹಕ ರಮ್ಯ ಪ್ರಕೃತಿ ವೈಭವದ ಮುಡಿಯಾಗಿ ಕಂಗೊಳಿಸುವ, ಮನಸೂರೆಗೊಳ್ಳುವ ಪರ್ವತ ಶ್ರೇಣಿ. ಇದು ಸಾಹಸಿಗರನ್ನು ಕೈಬೀಸಿ ಕರೆಯುವ ಸವಾಲಿನ ತಾಣವೂ ಹೌದು. ಚಾರಣ ಪೂರ್ವದ ನಮ್ಮ ಬೇಸ್‌ಕ್ಯಾಂಪ್ ಮಾನೆಬಂಜನ್ ಎಂಬ ಪುಟ್ಟ ಹಳ್ಳಿ. ಅಂದಿನ ರಾತ್ರಿ ನಮ್ಮ ವಿಶ್ರಾಂತಿ ಇಲ್ಲಿಯೇ. ಇದು ಡಾರ್ಜ್‌ಲಿಂಗ್‌ನಿಂದ ಸುಮಾರು 80 ಕಿ.ಮೀ. ದೂರದಲ್ಲಿದೆ. ಹಾಗೆಯೇ ಸಮುದ್ರ ಮಟ್ಟದಿಂದ ಸುಮಾರು 6325 ಅಡಿ ಎತ್ತರದಲ್ಲಿದೆ ಮತ್ತು ನೇಪಾಳದೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿದೆ.

ಮರುದಿನ ಮುಂಜಾನೆ ನಮ್ಮ ಚಾರಣಕ್ಕೆ ಸ್ಥಳೀಯ ಮಾರ್ಗದರ್ಶಕರಾದ ಅರ್ಪಣ್ ಭ್ಯಾ ಇವರೊಂದಿಗೆ ಮೊದಲ ದಿನದ ಚಾರಣವನ್ನು ಆರಂಭಿಸಿದೆವು. ಸುಮಾರು 3 ಕಿ.ಮೀ. ಏರು ತಗ್ಗುಗಳಿಂದ ಕೂಡಿದ ಪರ್ವತದ ಮಗ್ಗುಲಲ್ಲಿ ಸಾಗುತ್ತಾ ನಾವು ಚೈತ್ರೈ ಎಂಬ ಹಳ್ಳಿ ತಲುಪಿದೆವು. ಇಲ್ಲಿ ಅನೇಕ ಬೌದ್ಧ ದೇವಾಲಯಗಳಿವೆ. ಇದು ಸಮುದ್ರತಟದಿಂದ 8400 ಅಡಿ ಎತ್ತರದಲ್ಲಿದೆ. ಮತ್ತೆ ನಮ್ಮ ಚಾರಣ ಮುಂದುವರಿಸಿ ನಾವು ಮಗ್ಮಾ ಎಂಬ ಇನ್ನೊಂದು ಹಳ್ಳಿ ತಲುಪಿ ಊಟ ಮಾಡುವಾಗ 3 ಗಂಟೆಯಾಗಿತ್ತು. ಮಗ್ಮಾ ಎಂದರೆ ನೇಪಾಳಿ ಭಾಷೆಯಲ್ಲಿ ಮೋಡ ಎಂದರ್ಥ. ಚಳಿಗಾಲದ ಸಮಯವಾದ್ದರಿಂದ ಸುತ್ತಲೂ ಹಿಮದ ರಾಶಿ. ನಂತರ ಸುಮಾರು 11 ಕಿ.ಮೀ. ಚಾರಣ ಕ್ರಮಿಸಿದ ನಾವು 9,700 ಅಡಿ ಎತ್ತರದ ತುಮ್‌ಲಿಂಗ್ ಎಂಬ ಊರು ತಲುಪಿದೆವು. ಅಲ್ಲಿ ಬಿಸಿ ಬಿಸಿ ಸೂಪ್ ಕುಡಿದು, ವ್ಯೂ ಪಾಯಿಂಟ್‌ಗಳಲ್ಲಿ ಪ್ರಕೃತಿಯ ರಮಣೀಯ ದೃಶ್ಯಗಳನ್ನು ಸೆರೆಹಿಡಿದು ಆನಂದ ತುಂದಿಲರಾದೆವು. ತುಮ್‌ಲಿಂಗ್ ಎಂಬ ಹಳ್ಳಿಯೇನೋ ನೇಪಾಳದಲ್ಲಿದೆ; ಆದರೂ, ಭಾರತೀಯರಿಗೆ ಇಲ್ಲಿಗೆ ಬರುವುದಕ್ಕೆ ಯಾವುದೇ ಅಡಚಣೆಗಳಾಗಲೀ, ತಗಾದೆ ತಕರಾರುಗಳಾಗಲೀ ಇಲ್ಲ. ತುಂಬಾ ಚಳಿ ಪ್ರದೇಶ ಇದು. ಈ ಪರ್ಯಾವರಣದ ಉಷ್ಣತೆ ಶೂನ್ಯವನ್ನು ದಾಖಲಿಸುವುದರಿಂದ ಮಲೆನಾಡಿನವರಾದ ನಮಗೆ ವಿಪರೀತ ಚಳಿಯ ಅನುಭವವಾಗುತ್ತಿತ್ತು. ಆದ್ದರಿಂದ ಬೇಗನೆ ಬಿಸಿ ಬಿಸಿ ಊಟ ಮುಗಿಸಿ, ಬೆಚ್ಚನೆಯ ಹೊದಿಕೆಗಳೊಳಗೆ ತೂರಿಕೊಂಡು ನಿದ್ರಾಂಗನೆಯ ಮೊರೆ ಹೋದೆವು.

ಪ್ರಾತಃ 5–00ಕ್ಕೆ ಎದ್ದ ನಾವು ಎರಡನೆಯ ದಿನದ ಚಾರಣಕ್ಕೆ ಅಣಿಗೊಂಡೆವು. ಬಿಸಿ ಬಿಸಿಯಾದ ಚಹಾಪಾನ, ತಿಂಡಿಗಳು ನಮ್ಮ ದೇಹದ ಚಳಿಯನ್ನು ದೂರೀಕರಿಸಿ, ಲಗುಬಗೆಯಿಂದ ಮುಂದಡಿಯಿರಿಸಲು ಹುರುಪೇರಿಸಿದವು. ಇಂದು ನಾವು 16 ಕಿ.ಮೀ. ದೂರದ 10400 ಅಡಿ ಎತ್ತರದ ಕಾಳಿಪೋಕ್ರಿ ತಲಪುವ ಗುರಿ ಹೊಂದಿದ್ದೆವು. ಕಾಳಿ ಎಂದರೆ ಕತ್ತಲೆ; ಪೋಕ್ರಿ ಎಂದರೆ ಹಳ್ಳ (ಲೇಕ್) ಎಂಬ ಅರ್ಥ. ಇಲ್ಲಿ ನೀರು ಪೂರ್ತಿ ಹೆಪ್ಪುಗಟ್ಟಿರುವುದರಿಂದ ನಾವು ನೀರು ಕುಡಿಯಬೇಕಾಗಿದ್ದರೆ, ಪ್ರತಿಬಾರಿಯೂ ಮಂಜಿನ ಗಟ್ಟಿಗಳನ್ನು ಬಿಸಿ ಮಾಡಿ ಕರಗಿಸಿ ನೀರು ಕುಡಿಯಬೇಕಾಗುತ್ತಿತ್ತು. ಇಲ್ಲಿ ತುಂಬಾ ಹಿಮಗಟ್ಟಿದ ವಾತಾವರಣವಿದ್ದುದರಿಂದ ಪ್ರಕೃತಿಯ ರಮಣೀಯ ದೃಶ್ಯಗಳು ಮರೆಮಾಚಲ್ಪಟ್ಟು ನಮ್ಮ ಮನಃಪಟಲದಲ್ಲಾಗಲೀ, ಕೆಮರಾ ಕಣ್ಣಿನಲ್ಲಾಗಲೀ ಹಿಡಿದುಕೊಳ್ಳಲಾಗದ ಸ್ಥಿತಿ ಎಲ್ಲೆಡೆ ಗೋಚರಿಸುತ್ತಿತ್ತು. ಹೀಗೆ ನಮ್ಮ ಎರಡನೆಯ ದಿನದ ಚಾರಣ ಸಮಾಪನದ ಹೊತ್ತು ಸಂಪನ್ನಗೊಂಡಿತು.

ಮೂರನೆಯ ದಿನ ನಾವು ಸುಮಾರು 8 ಕಿ.ಮೀ. ನಡಿಗೆಯ ನಂತರ ನಮ್ಮ ಮುಖ್ಯ ಚಾರಣ ಲಕ್ಷ್ಯ ಸ್ಥಾನವಾದ ಸುಮಾರು 11,930 ಅಡಿ ಎತ್ತರದ ಸ್ಕಂದಪು ತಲುಪುವುದಾಗಿತ್ತು. 'ಸಿಂಗ್ರಿಲ್ಲಾ ನ್ಯಾಶನಲ್ ಪಾರ್ಕ್' ಎಂಬ ಪರ್ವತಶ್ರೇಣಿಯ ಈ ಪ್ರದೇಶವು ಭಾರತ – ನೇಪಾಳ ಗಡಿ ಭಾಗದಲ್ಲಿದೆ. ಭಾರತೀಯರು ಇದನ್ನು ಸ್ಕಂದಪುರ ಎಂದೂ ನೇಪಾಳಿಗರು ಇದನ್ನು ಸ್ಕಂದಪು ಎಂದು ಗುರುತಿಸುತ್ತಾರೆ. ಅತಿವಿರಳ ಜನಸಂಖ್ಯೆಯಿರುವ ಈ ಪ್ರದೇಶದಲ್ಲಿನ ಜನರು ಪ್ರವಾಸಿಗರು ಮತ್ತು ಚಾರಣಿಗರ ಆದರೋಪಚಾರಗಳನ್ನೇ ತಮ್ಮ ನಿತ್ಯಜೀವನ ನಿರ್ವಹಣೆಗೆ ಅವಲಂಬಿಸಿದ್ದಾರೆ. ಪ್ರಪಂಚದ ಎತ್ತರದ ಪರ್ವತಶ್ರೇಣಿಗಳಾದ ಮೌಂಟ್ ಎವರೆಸ್ಟ್, ಕಾಂಚನಗಂಗಾ, ಮಕಾಲು ಮೊದಲಾದ ಪರ್ವತ ಶಿಖರಗಳನ್ನು ಇಲ್ಲಿಂದ ನೋಡಬಹುದು. ಒಂದರ ಹಿಂದೆ ಒಂದು ಪರ್ವತ ಶ್ರೇಣಿಗಳು ಮಲಗಿರುವ ಮನುಷ್ಯನ ಆಕಾರದಲ್ಲಿರುವ ಕಾರಣದಿಂದ ಇದನ್ನು 'ಸ್ಲೀಪಿಂಗ್ ಬುದ್ಧ' ಎಂದು ಕರೆಯುತ್ತಾರೆ. ಇದು ಅತ್ಯಂತ ವಿಹಂಗಮ ನೋಟವನ್ನು ಕಟ್ಟಿಕೊಡುವ ಪರ್ಯಾವರಣ. ಸುತ್ತಲೂ ಹಿಮಾಚ್ಛಾದಿತ ಪರ್ವತ ಶ್ರೇಣಿ, ಅಲ್ಲಲ್ಲಿ ತಪ್ಪಲು ಪ್ರದೇಶ, ಒಂದಷ್ಟು ಹಸಿರು, ಮತ್ತೊಂದಷ್ಟು ಬಿಳಿಯಾದ ನೀರು ಹರಿಯುವ ನದಿ, ಕಿರು ಪ್ರವಾಹದ ಝರಿಗಳು ನಮ್ಮನ್ನು ಮಂತ್ರಮುಗ್ಧರನ್ನಾಗಿಸುತ್ತವೆ. ನಮ್ಮ ಚಾರಣದ ಮೂರನೇ ದಿನದ ರಾತ್ರಿಯನ್ನು ನಾವು ಇದೇ ಪ್ರಕೃತಿ ಮಡಿಲಲ್ಲಿ ಕಳೆದೆವು. ಇಲ್ಲಿಂದ ಸುಮಾರು 21 ಕಿ.ಮೀ. ದೂರದ ಪಲೂಟ್ ವಿಪರೀತವಾದ ಮತ್ತು ದುರ್ಗಮ ಹಿಮಪಾತದ ದೆಸೆಯಿಂದ ನಮ್ಮ ಮುಂದಿನ ಉದ್ದೇಶಿತ ಚಾರಣರಸ್ತೆ ಮುಚ್ಚಿತ್ತು. ಈ ಪ್ರಾಕೃತಿಕ ಕಾರಣದಿಂದ ಇಲ್ಲಿಂದ ನಾವು ಹಿಂದಿರುಗುವುದು ಅನಿವಾರ್ಯವಾಯಿತು.

ಗುರುಧಾಮ್ ಮತ್ತು ಸಿಪಿ ಎಂಬ ಹಳ್ಳಿಗಳ ಮೂಲಕ ಸಿಲಿಗುರಿ ಮಾರ್ಗವಾಗಿ ನಾವು ಮುಂದುವರಿದು ಡಾರ್ಜ್‌ಲಿಂಗ್ ತಲುಪಿದೆವು. ಡಾರ್ಜ್‌ಲಿಂಗ್ ತುಂಬಾ ಆಪ್ಯಾಯಮಾನವಾಗುವ ಹಿಲ್ ಸ್ಟೇಶನ್. ಅಂತೆಯೇ ಇದು ಸಾಹಸ ಚಟುವಟಿಕೆಗಳಿಗೆ ಹೆಸರಾದ ಸ್ಥಳ. ಇಲ್ಲಿನ ಮೃಗಾಲಯದಲ್ಲಿರುವ ಪ್ರಾಣಿ ಪಕ್ಷಿಗಳನ್ನು ನೋಡಿ ಒಂದಷ್ಟು ಸಾಹಸ ಚಟುವಟಿಕೆಗಳಲ್ಲಿ ಭಾಗವಹಿಸಿ, ಮ್ಯೂಸಿಯಂ ಹಾಗೂ ಪಾರ್ಕ್‌ಗಳಲ್ಲಿ ಮನದಣಿಯೆ ವಿಹರಿಸಿ, ಚಾರಣದ ಮಾಹಿತಿ ಇರುವ ಚಲನಚಿತ್ರವನ್ನು ನೋಡಿದೆವು. ಡಾರ್ಜ್‌ಲಿಂಗ್‌ನ ಸಾಯಂಕಾಲದ ಪ್ರಮುಖ ಆಕರ್ಷಣೆ ಡಾರ್ಜ್‌ಲಿಂಗ್ ರಿಜ್ [ರಿಜ್-ವ್ಯೂ ಪಾಯಿಂಟ್] ಇಲ್ಲಿ ಸುತ್ತಮುತ್ತಲಿನ ಪ್ರಕೃತಿಯ ರಮಣೀಯತೆಯನ್ನು ಸವಿಯುವುದರ ಜೊತೆಗೆ ಮನರಂಜನೆ ಪಾರ್ಟಿಗಳೂ ಆಯೋಜನೆಗೊಳ್ಳುತ್ತಿರುತ್ತವೆ. ಚಳಿಯಿಂದ ಬಿಡುಗಡೆಗೊಳ್ಳುವುದಕ್ಕೆ ಮತ್ತು ಮನೋವಿಲಾಸಕ್ಕಾಗಿ ಮಧುಸೇವನೆಯೂ ಇಲ್ಲಿ ಹೆಚ್ಚು ಕಂಡು ಬರುತ್ತದೆ. ಇದು ನಮಗೆ ತುಂಬಾ ಅಪರೂಪದ ಈ ಚಾರಣ, ಅದ್ಭುತ ಪ್ರಕೃತಿಯ ಜೊತೆಗಿನ ಅನುಭವಗಳ ಸಮ್ಮಿಶ್ರಣವನ್ನು ಕಟ್ಟಿಕೊಟ್ಟಿದೆ. ಇವೆಲ್ಲವನ್ನೂ ಚಿತ್ತದಲ್ಲಿ ಪಡಿಮೂಡಿಸಿಕೊಂಡ ನಾವು ಡಾರ್ಜ್‌ಲಿಂಗ್‌ನಿಂದ ವಿಮಾನಯಾನದ ಮೂಲಕ ಬೆಂಗಳೂರು, ಅಲ್ಲಿಂದ ರಸ್ತೆ ಮಾರ್ಗವಾಗಿ ಪುತ್ತೂರಿಗೆ ಬಂದು ನಮ್ಮ ಮನೆ ಸೇರಿದೆವು.

### ಚಾರಣ ಪ್ರಿಯರು, ಪ್ರವಾಸಿಗರು
### ಈ ಕೆಳಗಿನ ಅಂಶಗಳನ್ನು ಗಮನಿಸುವುದು ಹೆಚ್ಚು ಪ್ರಯೋಜನಕಾರಿ

- ಚಳಿಗಾಲ ಹೊರತು ಪಡಿಸಿ ಇಲ್ಲಿಗೆ ವಾಹನಗಳ ಮೂಲಕ ಬರುವ ಪ್ರವಾಸಿಗರೇ ಹೆಚ್ಚು.
- ಈ ಭಾಗದ ಪ್ರವಾಸ ಮಾರ್ಗ ಸಿಂಗ್ರಿಲ್ಲಾ ರಾಷ್ಟ್ರೀಯ ಉದ್ಯಾನವನದ ಮೂಲಕ ಹಾದು ಹೋಗುವ ಕಾರಣದಿಂದ ಈ ಉದ್ಯಾನವನದ ಆಡಳಿತದಿಂದ ನಾಮಮಾತ್ರದ ಶುಲ್ಕ ಪಾವತಿ, ಗುರುತು ಪತ್ರ ನೀಡಿ ಪರವಾನಿಗೆ ಪಡೆದುಕೊಳ್ಳಬೇಕು.
- ಆಧಾರ್ ಕಾರ್ಡ್‌ನ ಮೂಲಪ್ರತಿ, ಕೆಲವು ಜ಼ೆರಾಕ್ಸ್ ಪ್ರತಿ ಜೊತೆಯಲ್ಲಿರಲಿ.
- ಸಿಪಿ ಮೂಲಕ ಚಾರಣವನ್ನು ಆರಂಭಿಸಿ, ಮುಂದುವರಿದು ಮಾನೆಬಂಜನ್ ಪರಿಸರದಲ್ಲೂ ಚಾರಣ ಮುಂದುವರಿಸಬಹುದು.

✆ : 9845133409 **ಶ್ರೀ ಸುಧೀರ್ ಕೆ. ವೈ., ಬೊಳುವಾರು, ಪುತ್ತೂರು**

Sri Hari Adyapady
Proprietor
Ph : 0824-2251597 (R)
2252119 (O)
Mobile : 9448344612
9964072489
**SHIVA ELECTRICALS**
2nd Floor, Ozanam Complex, Church Building
Main Road, BAJPE, MANGALORE
*We undertake all types of Electrical, Plumbing and Sanitary works*

# ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು ಪ್ರಾಯೋಜಿತ ನೂತನ ಯೋಜನೆ ಪುತ್ತೂರಿನ 'ಶಿವಸದನ'ಕ್ಕೆ ದಾನಿಗಳಿಂದ ಸಹಾಯಹಸ್ತ



ನಂದಾವರ ಬೊಕ್ಕಸ ಶ್ರೀಮತಿ ಶಾರದಾ ಸುಕುಮಾರ್ ರಾವ್ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **50,000/-** ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಶ್ರೀ ಸಭಾದ ಉಪಾಧ್ಯಕ್ಷೆ ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಉಪಸ್ಥಿತರಿದ್ದರು.

ಕಾಸರಗೋಡು ತಾಳಿಪಡ್ಪು ನಿವಾಸಿ ನಿವೃತ್ತ ವಿಜಯಾ ಬ್ಯಾಂಕ್ ಅಧಿಕಾರಿ ಶ್ರೀ ಮುರಳೀಧರ್ ಮತ್ತು ವಿದುಷಿ ಶ್ರೀಮತಿ ರಾಧಾ ಮುರಳೀಧರ್ ತಮ್ಮ **50**ನೇ ವಿವಾಹ ವಾರ್ಷಿಕೋತ್ಸವದ ಸವಿನೆನಪಿಗಾಗಿ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಆಡಳಿತದ ಪುತ್ತೂರಿನ 'ಶಿವಸದನ' ಹಿರಿಯ ನಾಗರಿಕರ ವಸತಿ ನಿಲಯಕ್ಕೆ ರೂ. **50,000/-** ದೇಣಿಗೆಯನ್ನು ನೀಡಿದ್ದಾರೆ. ಮುಂದೆ ಇನ್ನೂ ಹೆಚ್ಚಿನ ದೇಣಿಗೆ ನೀಡುವ ಭರವಸೆ ನೀಡಿದ್ದಾರೆ. ಅವರಿಗೆ ಶ್ರೀ ಸುಬ್ರಹ್ಮಣ್ಯ ಸಭಾದ ಪರವಾಗಿ ಹಾರ್ದಿಕ ವಂದನೆಗಳು. ಈ ಸಂದರ್ಭ ಅವರ ಪುತ್ರಿಯರಾದ ಡಾ। ಶೋಭಿತಾ ಸತೀಶ್, ಶ್ರೀಮತಿ ಶ್ವೇತಾ ನಾಗೇಶ್, ಪ್ರೊ। ವರದರಾಜ್ ಚಂದ್ರಗಿರಿ, ಶ್ರೀ ಸುಕುಮಾರ್ ಆಲಂಪಾಡಿ, ಶ್ರೀ ಸಭಾದ ಉಪಾಧ್ಯಕ್ಷರುಗಳಾದ ಡಾ। ಎ. ಪಿ. ಕೃಷ್ಣ, ಶ್ರೀಮತಿ ಸುಮಂಗಲಾ ಪ್ರಭಾಕರ್, ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ, ಕೋಶಾಧಿಕಾರಿ ಶ್ರೀ ಪಿ. ಶ್ರೀಕಾಂತ್ ರಾವ್, ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಕುಸುಮಾ ನವೀನ್ ಉಪಸ್ಥಿತರಿದ್ದರು.




ಚಿತ್ರ : ಶ್ರೀ ರಘುವೀರ್ ಪೆರ್ಡೂರ್





3,4,5 & 6 BHK Luxury homes at the heart of Mangalore

**Live the vacation life!**

Bookings open now

**8882 777 444**

SHIVABAGH
KADRI

Land® Trades
BUILDERS & DEVELOPERS
BUILDING TRUST,DELIVERING VALUE


Please log on to : www.subramanyasabha.com For all information on Subramanya Sabha and Address of Sthanika in Mangalore, Bantwal & Moodabidri

*Publisher :* Sri Harsha Kumar Kedige, President, Shree Subrahmanya Sabha (R.), Kudpi Padmanabhayya Gardens, Kodialbail, Mangalore - 3

*Editor :* Sri M. S. Raghunath Rao, Darbe, Puttur *Printed at :* Rajesh Power Press, Darbe - 574 202, Puttur, D. K.